

ಪಶು ಆಹಾರ, ಸಾಬೂನು ತಯಾರಿಕೆ ಹಾಗೂ ಸೌಂದರ್ಯವರ್ಧಕಗಳಂತಹ ಕ್ಷೇತ್ರಗಳಲ್ಲೂ ಇದನ್ನು ಬಳಸಲಾಗುತ್ತದೆ. ರೇಷ್ಮೆ ಗೂಡಿನಿಂದ ತೆಗೆದ ಸೆರೆಸಿನ್ ಅಂಟು ಈ ಎಲ್ಲ ಉತ್ಪಾದನೆಗಳ ಹಿಂದಿರುವ ಗುಟ್ಟು!

## ಏನಿದು ಸೆರೆಸಿನ್?

ರೇಷ್ಮೆ ಗೂಡಿನಲ್ಲಿರುವ ಫೈಬ್ರೊಯಿನ್ ಮತ್ತು ಸೆರೆಸಿನ್‌ಗಳು ಅಂಟಿಕೊಳ್ಳುವ ಪ್ರೊಟೀನ್ ಆಗಿದ್ದು, ಇವು ರೇಷ್ಮೆ ಹುಳುವಿನ ಗೂಡಿಗೆ ರಚನೆಯನ್ನು ಒದಗಿಸುತ್ತವೆ. ಗೂಡುಗಳ ಅಂಟು ತೆಗೆಯುವ ಸಮಯದಲ್ಲಿ ಹೆಚ್ಚಿನ ಪ್ರಮಾಣದ ಸೆರಿಸಿನ್ ಅನ್ನು ತ್ಯಾಜ್ಯ ವಸ್ತುವೆಂದು ಎಸೆಯಲಾಗುತ್ತದೆ. ಈ ಸೆರೆಸಿನ್ ಅನ್ನು ಸೌಂದರ್ಯವರ್ಧಕ ಉತ್ಪನ್ನಗಳಲ್ಲಿ ಪರಿಣಾಮಕಾರಿಯಾಗಿ ಹೇಗೆ ಬಳಸಿಕೊಳ್ಳುವುದು ಎಂಬುದರ ಅಧ್ಯಯನ ಕೈಗೊಳ್ಳಲಾಗಿದೆ. ಈ ಸಂಶೋಧನೆಯಲ್ಲಿ, ರೇಷ್ಮೆಗೂಡುಗಳಿಂದ ಸೆರೆಸಿನ್ ಅನ್ನು ಪ್ರತ್ಯೇಕಿಸಿ ಸೌಂದರ್ಯವರ್ಧಕ ಉತ್ಪನ್ನಗಳ ಅಭಿವೃದ್ಧಿಯಲ್ಲಿ ಅವುಗಳ ಬಳಕೆ ಕುರಿತಾಗಿ ಕೂಲಂಕಷ ಅಧ್ಯಯನ ಮಾಡಲಾಗಿತ್ತು. ಅಂತಿಮವಾಗಿ, ಸೌಂದರ್ಯವರ್ಧಕಗಳಲ್ಲಿ ಕಚ್ಚಾ ವಸ್ತುವಾಗಿ ಅದರ ಬಳಕೆಯ ಸುರಕ್ಷತೆಯನ್ನೂ ಖಚಿತಪಡಿಸಿಕೊಳ್ಳಲಾಗಿದೆ.

ಸೆರೆಸಿನ್‌ನ ಅಣು ರಚನೆಯು ನಮ್ಮ ಚರ್ಮವನ್ನು ರೂಪಿಸುವ ಕೊಲಾಜಿನ್ ಅನ್ನು ಹೋಲುತ್ತದೆ. ಇದು ನೈಸರ್ಗಿಕವಾಗಿ ಚರ್ಮದ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ; ಚರ್ಮದ ಕೋಶಗಳ ಕಾರ್ಯನಿರ್ವಹಣೆಯನ್ನು ವೇಗಗೊಳಿಸುತ್ತದೆ; ಸುಕ್ಕುಗಳನ್ನು ತಡೆಯುತ್ತದೆ ಮತ್ತು ಚರ್ಮವನ್ನು ಬಿಗಿ ಮಾಡಿ ನಯಗೊಳಿಸುತ್ತದೆ.

ಇತ್ತೀಚಿನ ದಿನಗಳಲ್ಲಿ, ಸೌಂದರ್ಯವರ್ಧಕ ಉದ್ಯಮಕ್ಕೆ ಸೆರೆಸಿನ್ ಹೆಚ್ಚು ಬೇಡಿಕೆಯ ಜೈವಿಕ ವಸ್ತುವಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಸಹ

### ರಾಮಾಯಣದಲ್ಲೂ ಉಲ್ಲೇಖ!

ವಾಲ್ಮೀಕಿ ರಾಮಾಯಣದ ವಿವಿಧ ಕಾಂಡಗಳಲ್ಲಿ ಅದರಲ್ಲೂ ವಿಶೇಷವಾಗಿ ಸುಂದರ ಕಾಂಡದಲ್ಲಿ ಸೌಂದರ್ಯವರ್ಧಕಗಳು ಮತ್ತು ಸೌಂದರ್ಯ ಸಾಧನಗಳಿಗೆ ಸಂಬಂಧಿಸಿದ ಅನೇಕ ವಿವರಣೆಗಳಿವೆ. ಅಂಗರಾಗಗಳ (ಅಂಗ ಎಂದರೆ ದೇಹ, ರಾಗ ಎಂದರೆ ಸೌಂದರ್ಯ) ಬಗ್ಗೆ ಅನಸೂಯಾ ದೇವಿ (ಅತ್ರಿ ಮುನಿಯ ಪತ್ನಿ) ಮಹತ್ವದ ವಿವರಣೆ ನೀಡಿದ್ದಾಳೆ. ಸೀತಾದೇವಿ ತಮ್ಮ ಆಶ್ರಮಕ್ಕೆ ಭೇಟಿ ನೀಡಿದಾಗ ಆಕೆಗೆ ಅನಸೂಯಾ ದೇವಿಯು ಬಾಡದ ಹೂಗಳು, ರೇಷ್ಮೆವಸ್ತ್ರಗಳು, ಆಭರಣಗಳು ಮತ್ತು ಸೌಂದರ್ಯವರ್ಧಕಗಳನ್ನು ನೀಡಿ ಆಶೀರ್ವದಿಸಿದ್ದಳು ಎಂದು ಹೇಳಲಾಗುತ್ತದೆ. ದಶರಥ ಮಹಾರಾಜನ ಕಡೆಯಿಂದ ರೇಷ್ಮೆಯಿಂದ ಮಾಡಿದ ಅತ್ಯಮೂಲ್ಯ ವಧುವಿನ ವಸ್ತ್ರದೊಡನೆ ಸೀತೆಗೆ ಅಂಗರಾಗ್‌ಗಳನ್ನೂ ನೀಡಲಾಯಿತು ಎಂಬ ಉಲ್ಲೇಖಗಳಿವೆ.

ಜಾಗತಿಕ ಗೋ ಗ್ರೀನ್ ಕಾರ್ಯಸೂಚಿಯೊಂದಿಗೆ ಸ್ಪರ್ಧಿಸಲು ತಮ್ಮ ಉತ್ಪನ್ನಗಳಲ್ಲಿ ಸೆರೆಸಿನ್‌ನಂತಹ ನೈಸರ್ಗಿಕ ಪದಾರ್ಥಗಳ ಬಳಕೆಯತ್ತ ವಾಲುತ್ತಿವೆ. ಆದ್ದರಿಂದಲೇ ಈಗ ಸೆರೆಸಿನ್ ಆಧಾರಿತ ಸಾಬೂನು ಮತ್ತು ಸೌಂದರ್ಯವರ್ಧಕಗಳ ಮಹತ್ವ ಹೆಚ್ಚಿದೆ ಎನ್ನುವುದು ಬೆಂಗಳೂರಿನ ಕೇಂದ್ರ ರೇಷ್ಮೆ ತಾಂತ್ರಿಕ ಸಂಶೋಧನಾ ಸಂಸ್ಥೆಯಲ್ಲಿ (ಸಿಎಸ್‌ಟಿಆರ್‌ಐ) ರೇಷ್ಮೆ ಸೌಂದರ್ಯವರ್ಧಕಗಳ ಅಭಿವೃದ್ಧಿಯಲ್ಲಿ ತೊಡಗಿದ ವಿಜ್ಞಾನಿಗಳ ಅಭಿಮತ.

ಸೌಂದರ್ಯವರ್ಧಕಗಳು ಮತ್ತು ಸೌಂದರ್ಯ ಸಾಧನಗಳ ವಿವರಣೆಗಳನ್ನು ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಹೇರಳವಾಗಿ ಕಾಣಬಹುದು. ಜೀವನದ ವಿಜ್ಞಾನವೆನಿಸಿದ ಆಯುರ್ವೇದವು ದೇಹದ ಆರೋಗ್ಯ ಮತ್ತು ಸೌಂದರ್ಯಕ್ಕೆ ಸಮಾನ ಪ್ರಾಮುಖ್ಯ ನೀಡಿದೆ. ಆಯುರ್ವೇದದಲ್ಲಿ ಉಲ್ಲೇಖಿಸಲಾದ ಸೌಂದರ್ಯವರ್ಧಕಗಳು, ಮತ್ತು ಸೌಂದರ್ಯೀಕರಣ ತಂತ್ರಗಳು ಸೌಂದರ್ಯವನ್ನು ಹೆಚ್ಚಿಸುವುದಲ್ಲದೆ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸುಧಾರಿಸುತ್ತವೆ. ಅಂದಿನ ದಿನಗಳಲ್ಲಿ ನಾಸ್ಯ (ನಶ್ಯ), ಗಂಡುಶಾ (ಔಷಧೀಯ ಬಾಯಿ ಮುಕ್ಕಳಿಸುವ ದ್ರವ), ನೇತ್ರಾವತಿ (ಔಷಧೀಯ ಎಣ್ಣೆ/ತುಪ್ಪವನ್ನು ಕಣ್ಣಿನ ಕಕ್ಷೆಯ ಮೇಲೆ ನಿರ್ದಿಷ್ಟ ಅವಧಿಯವರೆಗೆ ಅನ್ವಯಿಸುವುದು), ಅಭ್ಯಂಗ (ಔಷಧಿಯುಕ್ತ ಎಣ್ಣೆಯಿಂದ ದೇಹದ ಮಸಾಜ್ ಹಾಗೂ ಸ್ನಾನ), ಉದ್ವರ್ತನ (ಕೂದಲಿನ ಬುಡದ ವಿರುದ್ಧ ದಿಕ್ಕಿನಲ್ಲಿ ಒಣ ಪುಡಿಯ ಮಸಾಜ್) ಅಂಜನಾ (ಕಾಡಿಗೆ), ಸ್ವೇದನಾ (ಬೆವರು ಬರಿಸುವುದು), ಅನುಲೇಪನ (ಔಷಧಿಯುಕ್ತ ಮುಲಾಮುಗಳನ್ನು ಹಚ್ಚುವುದು ಅಥವಾ ದೇಹದ ಮೇಲ್ಮೈ ಮೇಲೆ ಅಭಿಷೇಕ), ಪರಿಷೇಕಾ (ದೇಹದ ಮೇಲ್ಮೈ ಮೇಲೆ ಔಷಧೀಯ ದ್ರವವನ್ನು ಸಿಂಪಡಿಸುವುದು) ಇತ್ಯಾದಿ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗಿತ್ತು.

ಅನೇಕ ಆಯುರ್ವೇದ ಶಾಸ್ತ್ರೀಯ ಗ್ರಂಥಗಳಲ್ಲಿ ದೇಹದ ವಿವಿಧ ಭಾಗಗಳ ಮಸಾಜ್ (ಅಭ್ಯಂಗ) ಮತ್ತು ಅವುಗಳ ಉಪಯೋಗಗಳು, ಸೌಂದರ್ಯವರ್ಧಕ ಉದ್ದೇಶಕ್ಕಾಗಿ ವಿವಿಧ ಕಾಡಿಗೆಗಳು, ನಶ್ಯಗಳು, ಮುಲಾಮುಗಳು ಮತ್ತು ಆಂತರಿಕ ಔಷಧಿಗಳ ಬಗ್ಗೆ ವಿವರಿಸಲಾಗಿದೆ. ಸೌಂದರ್ಯ ಮತ್ತು ಆರೋಗ್ಯವನ್ನು ಹೆಚ್ಚಿಸುವ ಕಾರ್ಯವಿಧಾನಗಳನ್ನು ಈ ಗ್ರಂಥಗಳಲ್ಲಿ ತಿಳಿಸಲಾಗಿದೆ.

## ಪುರುಷರಿಗೂ ಮೇಕಪ್

ಆಧುನಿಕ ಮೇಕಪ್ ಬಳಕೆ ಸಾಮಾನ್ಯವಾಗಿ ಮಹಿಳೆಯರಲ್ಲೇ ಹೆಚ್ಚು. ಆದರೂ ಇತ್ತೀಚೆಗೆ ಹೆಚ್ಚಿನ ಸಂಖ್ಯೆಯ ಪುರುಷರು ತಮ್ಮ ಮುಖದ ಸೌಂದರ್ಯವನ್ನು ಹೆಚ್ಚಿಸಲು ಅಥವಾ ಕಲೆಗಳು ಮತ್ತು ಕಪ್ಪು ವೃತ್ತಗಳನ್ನು ಮರೆಮಾಚಲು ಮೇಕಪ್ ಅನ್ನು ಕೂಡ ಬಳಸುತ್ತಿದ್ದಾರೆ. ಕೆಲ ಪ್ರಖ್ಯಾತ ಬ್ರಾಂಡ್‌ಗಳು ಸೌಂದರ್ಯವರ್ಧಕಗಳ ಮಾರಾಟದಲ್ಲಿ ಪುರುಷರನ್ನೇ ಹೆಚ್ಚಾಗಿ ಗುರಿಯಾಗಿಸಿಕೊಂಡಿವೆ.

ಇಂದು ಅಂತರರಾಷ್ಟ್ರೀಯ ಮಾರುಕಟ್ಟೆಯು 'ಸೆರೆಸಿನ್' ಹೊಂದಿರುವ ಚರ್ಮದ ಆರೈಕೆ ಉತ್ಪನ್ನಗಳಿಂದ ತುಂಬಿ ತುಳುಕುತ್ತಿದೆ. ಅಂತೆಯೇ ಭಾರತೀಯ ಸೌಂದರ್ಯವರ್ಧಕ ಮಾರುಕಟ್ಟೆ ಸಹ 'ಸೆರೆಸಿನ್' ಬಳಕೆಯ ವ್ಯಾಪ್ತಿ ಅರಿತುಕೊಳ್ಳುವಲ್ಲಿ ಮತ್ತು ಅದರ ಬಳಕೆಯ ವೇಗವನ್ನು ಹೆಚ್ಚಿಸುವಲ್ಲಿ ಹಿಂದೆ ಬಿದ್ದಿಲ್ಲ. ಮೇಲಿನ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಬಾಡಿ ಲೋಷನ್, ಹೇರ್ ಕಂಡಿಷನರ್, ಮಾಯಿಶ್ಚರೈಸರ್‌ಗಳನ್ನು ಬೆಂಗಳೂರಿನ ಸಿಎಸ್‌ಟಿಆರ್‌ಐ ಹೊರತಂದಿದೆ.